**ಸಾಕ್ಷಿಗೆ ದಿನಾಂಕ 17.09.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಡಿ.ಆರ್. ವಕೀಲರಿಂದಃ**

1. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ದೂರನ್ನು ನನ್ನ ಮಗ ನೀಡಿರುತ್ತಾನೆ ಎಂದರೆ ಸರಿ. ದೂರು ನೀಡಿದ ನನ್ನ ಮಗನೂ ಸಹ ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿ. ಅಪಘಾತದ ಸ್ಥಳ ನಮಗೆ ಚಿರಪರಿಚಿತ ಸ್ಥಳ ಎಂದರೆ ಸರಿ. ಅಪಘಾತ ನಡೆದ ಸ್ಥಳದ ಸುತ್ತ-ಮುತ್ತ ಯಾವುದೇ ಮನೆ ಅಥವಾ ಹೋಟೆಲ್ ಗಳು ಇರುವುದಿಲ್ಲ. ಅಪಘಾತದ ಕುರಿತು ನಮಗೆ ಅಲ್ಲಿದ್ದ ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ಸಾರ್ವಜನಿಕರು ಅಪಘಾತಪಡಿಸಿದ ಬಸ್ಸಿನ ಸಂಖ್ಯೆಯನ್ನು ತಿಳಿಸಿರುವುದಿಲ್ಲ ಎಂದರೆ ಸರಿ. ದೂರಿನಲ್ಲಿಯೂ ಸಹ ಬಸ್ ನಂಬರ್ ನಮೂದಿಸಿಲ್ಲ ಎಂದರೆ ಸರಿ.

2. ಅಪಘಾತದಲ್ಲಿ ಮೃತ ಪಟ್ಟ ನನ್ನ ತಾಯಿಗೆ ಒಟ್ಟು 3 ಜನ ಮಕ್ಕಳು, ಅವರುಗಳೆಂದರೆ ಮೊದಲನೇ ಮಗ ಚೌಡಪ್ಪ, ಎರಡನೇ ಮಗ ನಾನು ಸೋಮಪ್ಪ ಮತ್ತು ಮೂರನೇ ಮಗಳು ಮುನಿರತ್ನಮ್ಮ, ಮುನಿರತ್ನಮ್ಮ 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಿಪಿ.2 ದೂರಿನಲ್ಲಿ ಮುನಿರತ್ನ ಎಂಬ ಹೆಸರು ಮುನಿರತ್ನಮ್ಮನಿಗೆ ಸಂಬಂಧಿಸಿದ್ದು. ಮುನಿರತ್ನಮ್ಮ ತೀರಿ ಹೋದ ಬಗ್ಗೆ ಯಾವುದೇ ದಾಖಲೆಗಳಲ್ಲಿ ನಮೂದಿಸಿಲ್ಲ ಎಂದರೆ ಅವರು ಚಿಕ್ಕವಯಸ್ಸಿನಲ್ಲಿರುವ ಫೋಟೋ ಮಾತ್ರ ಇರುತ್ತದೆ.

3. ನಿಪಿ.2 ದೂರಿನ ಪ್ರಕಾರ ಪ್ರತಿದಿನ ನನ್ನ ತಾಯಿ ಬೆಳಿಗ್ಗೆ 5.45 ರ ಸಮಯಕ್ಕೆ ಸರ್ಕಾರಿ ಬಸ್ಸಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ಬೇರೆ ಯಾವ ಬಸ್ಸುಗಳು ಓಡಾಡುತ್ತಿದ್ದವು ಎಂದು ನನಗೆ ಗೊತ್ತಿಲ್ಲ. ಅಪಘಾತ ನಡೆದ ಸ್ಥಳದ ಸುತ್ತ-ಮುತ್ತ ಯಾವುದೇ ಸಿಸಿಟಿವಿ ಕ್ಯಾಮೆರಾ ಇರುವುದಿಲ್ಲ. ಸ್ಥಳ ಪಂಚನಾಮೆಯಲ್ಲಿ, ಕಚ್ಚಾ ನಕಾಶೆಯಲ್ಲಿ, ಶವಾತನಿಖಾ ವರದಿಯಲ್ಲಿ

ಯಾವುದೇ ಬಸ್ ಸಂಖ್ಯೆ ನಮೂದಾಗಿಲ್ಲ ಎಂದರೆ ಸರಿ. ಅಪಘಾತವಾದ 15 ದಿನಗಳ ನಂತರ ಒಂದನೇ ಎದುರುದಾರರ ವಾಹನವನ್ನು ಪೊಲೀಸರು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ನಾನು ಹಾಜರುಪಡಿಸಿರುವ ಹೇಳಿಕೆಗಳಲ್ಲಿಯೂ ಸಹ ಬಸ್ ಸಂಖ್ಯೆ ನಮೂದಿಲ್ಲ ಎಂದರೆ ಸರಿ. ಒಂದನೇ ಎದುರುದಾರರ ಬಸ್ಸು ಅಪಘಾತದಲ್ಲಿ ಭಾಗಿಯಾಗಿದೆ ಎಂದು ಪೊಲೀಸರು ಯಾವ ರೀತಿ ತನಿಖೆ ಮಾಡಿದ್ದಾರೆ ಎಂದರೆ ನನ್ನ ಮಗ ಅಪಘಾತ ನಡೆದ ಸ್ಥಳದಲ್ಲಿ ಬಿದ್ದಿದ್ದ ಬಸ್ಸಿನ ಬಂಪರ್ ನ ಒಂದು ತುಣುಕನ್ನು ಪೋಲೀಸರಿಗೆ ನೀಡಿದ್ದು ಅದರ ಆಧಾರದ ಮೇಲೆ ತನಿಖೆ ಮಾಡಿರುತ್ತಾರೆ. ನಿಪಿ.5 ಐಎಂವಿ ವರದಿಯ ಪ್ರಕಾರ ಬಸ್ಸಿಗೆ ಯಾವುದೇ ಜಖಂಗಳು ಆಗಿಲ್ಲ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಮಗನಿಗೆ ಸಿಕ್ಕದ್ದ ತುಣುಕನ್ನು ಎಫ್.ಎಸ್.ಎಲ್. ಗೆ ಕಳುಹಿಸಿದ ಒಂದನೇ ಎದುರುದಾರರ ಬಸ್ಸಿಗೆ ಸೇರಿದ್ದು ಎಂದು ಖಚಿತ ವರದಿಯನ್ನು ಪಡೆದುಕೊಂಡಿದ್ದರಾ ಎಂದರೆ ನನಗೆ ಗೊತ್ತಿಲ್ಲ. ನನಗೆ ಪೊಲೀಸರ ಸಾಕ್ಷ್ಯ ಮಾಡಿಸಲು ಆಗುವುದಿಲ್ಲ. ಪೊಲೀಸರನ್ನು ಸಾಕ್ಷಿಗೆ ಕರೆಸಿದರೆ ನನ್ನ ವಿರುದ್ಧ ತೀರ್ಪು ಆಗುತ್ತದೆ ಎಂದು ಕರೆಸುತ್ತಿಲ್ಲ ಎಂದರೆ ಸರಿಯಲ್ಲ.

5. ಅಪಘಾತವು ಯಾವುದೋ ಒಂದು ಅಪರಿಚಿತ ಬಸ್ಸಿನಿಂದ ಆಗಿದೆ, ಒಂದನೇ ಎದುರುದಾರರ ಬಸ್ಸನ್ನು ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ. ನಾವು, ಪೊಲೀಸರು ಮತ್ತು ಒಂದನೇ ಎದುರುದಾರರು ಪರಸ್ಪರ ಶಾಮೀಲಾಗಿ ಪರಿಹಾರಕ್ಕೋಸ್ಕರ ಒಂದನೇ ಎದುರುದಾರರ ಬಸ್ಸನ್ನು ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ನನಗೂ ಮತ್ತು ಒಂದನೇ ಅರ್ಜಿದಾರರಿಗೂ ವಿವಾಹವಾಗಿದೆ ಎಂದರೆ ಸರಿ. ಒಂದನೇ ಅರ್ಜಿದಾರರು ವಿದ್ಯಾರ್ಥಿ ನಿಲಯದಲ್ಲಿ ಅಡುಗೆ ಸಹಾಯಕರಾಗಿ ಕೆಲಸ

ಮಾಡುತ್ತಾರೆ. ನಾನು ವ್ಯವಸಾಯ ಮಾಡಿಕೊಂಡು ಇರುತ್ತೇನೆ. ನಾನು ಮತ್ತು ನನ್ನ ಅಣ್ಣ ಬೇರೆ ಬೇರೆ ವಾಸವಿರುತ್ತೇವೆ ಎಂದರೆ ಸರಿ.

6. ದಾಖಲೆಗಳ ಪ್ರಕಾರ ನನ್ನ ತಾಯಿಗೆ ಅಪಘಾತದ ಸಮಯಕ್ಕೆ 76 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ ವಯಸ್ಸಾಗಿದ್ದ ಕಾರಣ ಯಾರು ಕೂಲಿ ಕೆಲಸ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ಮೇಲೆ ಅವಲಂಬಿತಳಾಗಿದ್ದಳು ಎಂದರೆ ಸರಿಯಲ್ಲ. ನಾನು ಮತ್ತು ಒಂದನೇ ಅರ್ಜಿದಾರರು ನನ್ನ ತಾಯಿಯ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ತಿಂಗಳಿಗೆ ರೂ.25,000/- ಸಂಪಾದಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಅಂತ್ಯಸಂಸ್ಕಾರಕ್ಕೆ ರೂ.50,000/- ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಒಂದನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ವಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**